


ಇಲ್ಲಿ ಯಾವುದೂ ಶಾಶ್ವತವಲ್ಲ ಎನ್ನುವ ಪ್ರಾಕೃತಿಕ ಸತ್ಯಕ್ಕೆ ಉದ್ಯೋಗವೂ ಹೊರತಾದುದಲ್ಲ. ಜಾಗತಿಕ ಪೇಟೆಯಲ್ಲಂತೂ ಪದವಿ–ಕೌಶಲ ಇರುವವರಿಗೆ ಒಳ್ಳೆಯ ಉದ್ಯೋಗ ದೊರೆಯುವುದು ಸಹಜವಾಗಿರುವಂತೆ, ಉದ್ಯೋಗ ಕಳೆದುಕೊಳ್ಳುವುದು ಅಸಹಜವೂ ಅಲ್ಲ. ಆರ್ಥಿಕ ಹಿಂಜರಿತದ ಈ ದಿನಗಳಲ್ಲಂತೂ ಲೇ–ಆಫ್ ಎನ್ನುವುದು ದಿನಬಳಕೆಯ ಶಬ್ದಗಳ ಸಾಲಿಗೆ ಸೇರಿಹೋಗಿದೆ. ಕೋವಿಡ್ ತೀವ್ರತೆಯ ಕಾಲಘಟ್ಟದಿಂದ ಇಲ್ಲಿಯವರೆಗೆ ಲಕ್ಷಾಂತರ ಜನ ಉದ್ಯೋಗ ಕಳೆದುಕೊಂಡಿದ್ದಾರೆ. ಈಗಲೂ ಉದ್ಯೋಗ ನಷ್ಟದ ಟ್ರೆಂಡ್ ಇದ್ದೇಇದೆ. ದೊಡ್ಡ ಕಂಪನಿಗಳಲ್ಲಿ ಲಕ್ಷಾಂತರ ರೂಪಾಯಿ ದುಡಿಯುತ್ತಿದ್ದವರು ಕೆಲಸ ಕಳೆದುಕೊಂಡು ಕಂಗಾಲಾಗಿದ್ದಾರೆ. ಹೊಸಬರಿಗೆ ಕೆಲಸದ ಬೇಟೆ ಕಠಿಣವಾಗುತ್ತಿದೆ. ಉದ್ಯೋಗ ಕಳೆದುಕೊಳ್ಳುವ ಪರಿಸ್ಥಿತಿ ಸದ್ಯದ ಕಾಲಮಾನದಲ್ಲಿ ಯಾರಿಗೆ ಯಾವಾಗ ಬೇಕಾದರೂ ಬರಬಹುದು. ಉದ್ಯೋಗ ನಷ್ಟ ಎನ್ನುವುದು ಈಗ ಅಚ್ಚರಿಯೋ ಅನಿರೀಕ್ಷಿತವೋ ಅಲ್ಲ. ಅಪಾಯವನ್ನು ಮೊದಲೇ ಊಹಿಸಿ, ಆ ಪರಿಸ್ಥಿತಿ ಎದುರಿಸಲು ಸಿದ್ಧತೆ ನಡೆಸಿದ್ದರೆ ಉದ್ಯೋಗ ಕಳೆದುಕೊಂಡಾಗ ಆಘಾತವೂ ಆಗುವುದಿಲ್ಲ. ಈಗ ನಮ್ಮ ಮುಂದಿರುವ ಸವಾಲು, ಆರ್ಥಿಕ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಹಾಗೂ ಆ ಬಿಕ್ಕಟ್ಟಿನಿಂದ ಹೊರಬರಲು ನಾವು ಯಾವ ಬಗೆಯ ಸಿದ್ಧತೆ ನಡೆಸುತ್ತೇವೆ ಎನ್ನುವುದು. ಈ ಯೋಚನೆಯನ್ನು ‘ಕಂಫರ್ಟ್ ಜೋನ್’ನಲ್ಲಿ ಇರುವಾಗಲೇ ಮಾಡುವುದು ಜಾಣತನ.

**ಕಾವ್ಯಶ್ರೀ ಎನ್.**